# ಗುಬ್ಬಿ ಕಾಲನಿಯ ಕೋಸಗಿ ಲೇಔಟನ ನಿರ್ಜನ ಪ್ರದೇಶದಲ್ಲಿ ಕೊಲೆ ಮಾಡಿದ ಮೂರು ಜನ ಆರೋಪಿತರ ಬಂಧನ

ದಿನಾಂಕ 11/06/2022 ರಂದು ಬೆಳಿಗ್ಗೆ 7–30 ಗಂಟೆ ಸುಮಾರಿಗೆ ಪ್ರಕರಣ ಫಿರ್ಯಾದಿ ಶ್ರೀ ಜಿತೇಂದ್ರ ಕಳಸಕರ ಇವರು ಬ್ರೆಸ ಮಾಡುತ್ತಾ ಮನೆ ಹಿಂದುಗಡೆ ಬಂದಾಗ ಕಲಬುರಗಿ ನಗರದ ಶ್ರೀ ಲಕ್ಷ್ಮೀ ನಗರದಲ್ಲಿ ಡಾ: ಕೋಸಗಿ ಇವರು ಹೊಸದಾಗಿ ಕಟ್ಟುತ್ತಿರುವ ಕಾಲೇಜ ಕಂಪೌಂಡ ಹತ್ತಿರ ಅಪರಿಚಿತ ಗಂಡು ಮನುಷ್ಯ ಅಂದಾಜ 35 ರಿಂದ 40 ವರ್ಷ ವಯಸ್ಸಿನವನು ಕೈ ಕಾಲು ಆಡಿಸುತ್ತಾ ಒದ್ದಾಡುತ್ತಾ ಬಿದ್ದಿದ್ದನ್ನು ನೋಡಿ ಪೊಲೀಸ ಠಾಣೆಗೆ ಮಾಹಿತಿ ತಿಳಿಸಿದಾಗ ಬೆಳಗಿನ 8–30 ಗಂಟೆ ಸುಮಾರಿಗೆ ಪೊಲೀಸರು ಬಂದಾಗ ಅಲ್ಲಿಗೆ ಹೋಗಿ ನೋಡಿದಾಗ ಅವನು ಮೃತಪಟ್ಟಿದ್ದು ಕಂಡು ಬಂತು. ಅಪರಿಚಿತ ವ್ಯಕ್ತಿಗೆ ಯಾರೋ ಅಪರಿಚಿತರು ಯಾವುದೋ ದುರುದ್ದೇಶದಿಂದ ಯಾವುದೋ ಕಾರಣಕ್ಕಾಗಿ ಪರಸಿ ಕಲ್ಲುಗಳಿಂದ ಮುಖದ ಮೇಲೆ ಹೊಡೆದು ಭಾರಿ ರಕ್ತಗಾಯಗೊಳಿಸಿ ಕೊಲೆ ಮಾಡಿರುತ್ತಾರೆ ಎಂದು ಶ್ರೀ ಜಿತೇಂದ್ರ ತಂದೆ ಗೋಪಾಲ ಕಳಸಕರ ಸಾ: ಶ್ರೀ ಲಕ್ಷ್ಮೀ ನಗರ ಕಲಬುರಗಿ ಕೊಟ್ಟ ಹೇಳಿಕೆ ಫಿರ್ಯಾದಿ ಮೇಲಿಂದ ಎಂ.ಬಿ. ನಗರ ಪೊಲೀಸ ಠಾಣೆಯಲ್ಲಿ ಗುನ್ನೆ ನಂಬರ 47/2022 ಕಲಂ 302 ಐಪಿಸಿ ಪ್ರಕಾರ ಪ್ರಕರಣ ದಾಖಲಿಸಿಕೊಂಡು ತನಿಖೆ ಕಾಲದಲ್ಲಿ ಕೊಲೆಯಾದ ಅಪರಿಚಿತ ವ್ಯಕ್ತಿ ಮಹ್ಮದ ಕರೀಮಸಾಬ ತಂದೆ ಖಾಜಾ ಪಟೇಲ್ ವ:40 ವರ್ಷ ಉ: ಕೂಲಿ ಕೆಲಸ ಸಾ:ಆಜಾದಪೂರ ರೋಡ ಉಮರ ಕಾಲನಿ ಕಲಬುರಗಿ ಅಂತಾ ಗೊತ್ತಾಗಿರುತ್ತದೆ. ಸದರ ಪ್ರಕರಣದಲ್ಲಿ ಅಪರಿಚಿತ ಆರೋಪಿತರ ಪತ್ತೆ ಕುರಿತು ಶ್ರೀ ಡಾ: ವೈ.ಎಸ್. ರವಿಕುಮಾರ ಐ.ಪಿ.ಎಸ್. ಪೊಲೀಸ ಆಯುಕ್ತರು ಕಲಬುರಗಿ ನಗರ, ಸನ್ಮಾನ್ಯ ಶ್ರೀ ಅಡ್ಡೂರು ಶ್ರೀನಿವಾಸಲು ಐ.ಪಿ.ಎಸ್.ಉಪ ಪೊಲೀಸ ಆಯುಕ್ತರು ಕಲಬುರಗಿ ನಗರ, ಶ್ರೀ ಶ್ರೀಕಾಂತ ಕಟ್ಟಿಮನಿ ಕೆ.ಎಸ್.ಪಿ.ಎಸ್. (ಅ.ವಿ. & ಸಂಚಾರ) ಉಪ ಪೊಲೀಸ ಆಯುಕ್ತರು ಕಲಬುರಗಿ ನಗರ, ಶ್ರೀ ದೀಪನ್ ಎಂ.ಎನ್. ಐ.ಪಿ.ಎಸ್. ಎ.ಎಸ್.ಪಿ. (ನಾರ್ಥ) ಉಪವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಲ್ಲಿ ಚಂದ್ರಶೇಖರ ತಿಗಡಿ ಪಿ.ಐ. ಎಂ.ಬಿ. ನಗರ ಪೊಲೀಸ ಠಾಣೆ ನೇತೃತ್ವದಲ್ಲಿ ಸಿಬ್ಬಂದಿಯವರಾದ ಶ್ರೀ ಹುಸೇನಬಾಷಾ ಎ.ಎಸ್.ಐ. ಶ್ರೀ ಶಿವಶರಣಪ್ಪ ಎ.ಎಸ್.ಐ. ಶ್ರೀ ಯತ್ನಾಳ ಸಿದ್ಧ ಎ.ಆರ್.ಎಸ್.ಐ. ಶ್ರೀ ತೌಸೀಫ್ ಚೌಕ ಪೊಲೀಸ ಠಾಣೆ ಮತ್ತು ಎಂ.ಬಿ. ನಗರ ಠಾಣೆಯ ಸಿಬ್ಬಂದಿಯವರಾದ ಶ್ರೀ ಹಣಮಂತ ತೋಟದ, ಶ್ರೀ ಅಶೋಕ ಕಲಾಲ್, ಶ್ರೀ ಗುರುರಾಜ, ಶ್ರೀ ದಸ್ತಯ್ಯ, ಶ್ರೀ ಬೀರಪ್ಪ, ಶ್ರೀ ನಾಗರಾಜ, ಶ್ರೀ ವಿಜಯಕುಮಾರ ಎಪಿಸಿ ಇವರುಗಳನ್ನೊಂಡ ತಂಡ ರಚನೆ ಮಾಡಿ, ಘಟನಾ ಸ್ಥಳದಲ್ಲಿ ದೊರೆತ ಚಪ್ಪಲಗಳ ಆಧಾರದ ಮೇಲೆ ಘಟನಾ ಸ್ಥಳದ ಸುತ್ತ ಮುತ್ತಲಿನ ಸಿಸಿಟಿವಿ ಪರಿಶೀಲಿಸುವ ಕಾಲಕ್ಕೆ ಆರೋಪಿತರ ಸುಳಿವು ಸಿಕ್ಕ ಮೇರೆಗೆ ಇಂದು ದಿನಾಂಕ 23/06/2022 ರಂದು ಬೆಳಗಿನ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ರಾಜಾಪೂರ ರೋಡಿನ ಮೇಲೆ ಆರೋಪಿತರಾದ 1)ಕೇವಲ ತಂದೆ ಕಿಶನ್ ಉಪಾಧ್ಯಯ ವ :28 ವರ್ಷ ಉ: ಆಟೋ ಡ್ರೈವರ್ 2) ಜಿತೇಶ ತಂದೆ ಶ್ರವಣ ಉಪಾದ್ಯಾಯ ವ:29 ವರ್ಷ ಉ: ಕೂಲಿ ಕೆಲಸ 3)ಪ್ರೇಮ್ ತಂದೆ ಬ್ರಹ್ಮಚಾರಿ ಉಪಾಧ್ಯಯ ಉ: ಆಟೋ ಡ್ರೈವರ್ ಸಾ : ಮೂವರು ವಿಠ್ಠಲ್ ಮಂದಿರ ಹತ್ತಿರ ಬಾಪೂ ನಗರ ಕಲಬುರಗಿ ಇತನಿಗೆ ಹಿಡಿದು ವಿಚಾರಣೆಗೆ ಒಳಪಡಿಸಿದಾಗ ಅವರು ಕೊಲೆ ಮಾಡಿದ ತಪ್ಪೊಪ್ಪಿಕೊಂಡಿದ್ದರಿಂದ, ಕೃತ್ಯಕ್ಕೆ ಉಪಯೋಗಿಸಿದ ಆಟೋ ಜಪ್ತ ಪಡಿಸಿಕೊಂಡು ಅವರುಗಳಿಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿದೆ. ಅಪರಿಚಿತ ಕೊಲೆ ಮಾಡಿದ ಆರೋಪಿತರಿಗೆ ವೈಜ್ಞಾನಿಕ ರೀತಿಯಲ್ಲಿ ಪತ್ತೆ ಹಚ್ಚಿದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಮಾನ್ಯ ಪೊಲೀಸ ಆಯುಕ್ತರು ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ